ಘನೀಭವಿಸಿದ ಶಿಲೆಗಳಾದರು. ತಂಗಿ ಡಿಸೆಂಬರ್‌ನ ಸೇವಂತಿಗೆಯಂತೆ ಥರಥರನೆ ನಡುಗಿ ಬಿಟ್ಟಳಂತೆ.

ನನ್ನ ಕುಟುಂಬವನ್ನು ಇಷ್ಟೆಲ್ಲಾ ನೋವಿಗೆ ಗುರಿ ಮಾಡಿದ ಅವರಿಗೆ ಎಂತಹ ಶಿಕ್ಷೆಯಾಗಬೇಕು.

ಈ ಘಟನೆ ನಡೆದ ಐದು ತಿಂಗಳ ನಂತರ ಅಂದು ನಾನು, ಚೈತನ್ಯ ಹರಟುತ್ತಾ ಮೆಲ್ಲಗೆ ಹೆಜ್ಜೆ ಹಾಕುತ್ತಿದ್ದೇವೆ. ಅವನು ಹೇಳುತ್ತಿದ್ದ ಜೋಕ್ಸ್‌ಗೆ ನಗುತ್ತಿದ್ದರೆ 'ಎಂತಹ ಸುಂದರ ನಗೆ' ಎನ್ನುತ್ತಾ ನನ್ನನ್ನು ಹತ್ತಿರಕ್ಕೆ ಬರಸೆಳೆದು ಮುದ್ದಿಸಹೋದ. ಮೈಯೆಲ್ಲ ಕಂಪಿಸಿದಂತಾಗಿ ಅವನನ್ನು ಒಮ್ಮೆಲೇ ಹಿಂದಕ್ಕೆ ತಳ್ಳಿದೆ. ದಿಗ್ಭ್ರಾಂತನಾದ. ಸ್ವಲ್ಪ ಹೊತ್ತಿಗೆ ಎಚ್ಚರಗೊಂಡು ಶಾಕ್ ಆದೆ. ನಿಜವಾಗಿಯೂ ನನಗೆ ಇದುವರೆಗೂ ತಿಳಿಯಲೇ ಇಲ್ಲ. ಗಂಡಸಿನ ಸ್ಪರ್ಶಕ್ಕೆ ನನ್ನ ದೇಹ ಇಷ್ಟೊಂದು ಕ್ರೂರವಾಗಿ ಪ್ರತಿಕ್ರಿಯಿಸುತ್ತದೆ ಎಂದು. ಕಂಪಿಸಿ ಬಿಟ್ಟೆ.

ನನಗೆ ಗೊತ್ತಿಲ್ಲದೆಯೇ ಇಷ್ಟೊಂದು ಭೀತಿಯನ್ನು ನನ್ನಲ್ಲಿ ತುಂಬಿದ ಅವರಿಗೆ ಯಾವ ಶಿಕ್ಷೆಯನ್ನು ವಿಧಿಸಿದರೆ ನನ್ನ ಭೀತಿ ಕಡಿಮೆಯಾದೀತು...

ಅವರನ್ನು ಒಮ್ಮೆ ನೋಡಬೇಕೆನಿಸಿತು. ಹೇಗಿರಬಹುದು. ಪೊಲೀಸರ ನಡುವೆ ನ್ಯಾಯಾಲಯದಲ್ಲಿ ಶಿಕ್ಷೆ ವಿಧಿಸುವುದಕ್ಕೆ ಮುನ್ನ ಅವರ ಹತ್ತಿರಕ್ಕೆ ಹೋಗಿ ಎದುರಿಗೆ ನಿಂತರೆ ನನ್ನನ್ನು ನೋಡಿದ ಅವರಿಗೆ ಆಗಲೂ ಅಂತಹ ಪೈಶಾಚಿಕವಾದ ಆಲೋಚನೆಗಳು ಬರಬಹುದೆ. ಅಂತಹದ್ದೆ ನೀಚ ಬಯಕೆಗಳೇ ಹುಟ್ಟಬಹುದೆ. ಆಗ ಅವರ ಕಣ್ಣು ಹೇಗಿರಬಹುದು. ಆ ವಿಕಟ ಅಟ್ಟಹಾಸಗಳು ಇದ್ದಾವೆಯೇ. ಹಾಗೆಯೇ ಈ ಹಿಂದಿನಂತೆಯೇ ಹೊಲಸು ಮಾತಾಡಬಹುದೆ. ಇಬ್ಬರು ಕಾಲೂಕೈ ಅದುಮಿ ಹಿಡಿದುಕೊಂಡರೆ ಮತ್ತೊಬ್ಬ ಶರೀರ ಧ್ವಂಸಕ್ಕೆ ಮುಂದಾಗಿ ಪಾಲು ಹಂಚಿಕೊಂಡಂತೆ ಅವರು ಈಗಲೂ ಹಾಗೆಯೇ ಒಬ್ಬರನ್ನೊಬ್ಬರು ಉಕ್ಸಾಯಿಸಿಕೊಂಡು ಕುಹಕ ನಗೆ ಬೀರಬಹುದೆ.

ಅವರನ್ನು ಒಮ್ಮೆ ನೋಡಬೇಕೆನಿಸಿದೆಯೆಂದು ಪೊಲೀಸ್ ಆಫೀಸರನ್ನು ಕೇಳಿದರೆ "ಯಾವಾಗ ಭೇಟಿಯಾಗುತ್ತೀರಿ? ಬೇಕಾದ ವ್ಯವಸ್ಥೆ ಮಾಡುತ್ತೇನೆ. ಆದರೆ, ಅವರು ನಿಮ್ಮನ್ನು ಭೇಟಿಯಾಗಲು ಒಪ್ಪಬೇಕಲ್ಲ" ಎಂದ.

ಬಿಚ್ಚುಗತ್ತಿಗಳಂತೆ ನನ್ನ ಮೇಲೆರಗಿದ ಅವರ ಕಣ್ಣುಗಳಲ್ಲಿ ಒಂದಿಷ್ಟಾದರೂ ಭೀತಿಯನ್ನು ಕಾಣಬಲ್ಲೆನೆ. ಅಂದು ನಾನು ಮಾಡಿದ ಜೀವದ ಹೋರಾಟ ಅವರಿಗೆ ನೆನಪಿರಬಹುದೆ.

ಅವರನ್ನು ನಾನು ನೋಡಬೇಕೆಂದುಕೊಂಡೆ. ಆದರೆ, ಅವರು ಒಪ್ಪಲಿಲ್ಲ... ಹಾಗಾಗಿ ಭೇಟಿಯಾಗಲಾಗಲಿಲ್ಲ.

ಒಂದು ದಿನ ಜಿವಿಯವರ ಜೊತೆ ಮಾತಾಡುತ್ತಾ "ನಮ್ಮ ಅಜ್ಜಿ ಈಗ ನಿನ್ನ ಜಾತಕದಲ್ಲಿ ಶನಿ ಕೂಡ ಇಲ್ಲವಲ್ಲ. ಯಾಕೆ ಹೀಗಾಯಿತು. ಜಾತಕ ನೋಡಿದವರು ಉತ್ತಮ ಜಾತಕದವಳೆಂದರಲ್ಲ... ಮತ್ತೆ ಇದೆಲ್ಲ ನಡೆದದ್ದಾದರೂ ಹೇಗೆ... ವಾಸ್ತು ದೋಷವಿರಬಹುದೆ. ನಿಜಕ್ಕೆ ಯಾವ ಗ್ರಹ ಇಂತಹ ಆಪತ್ತನ್ನು ತಂದೊಡ್ಡಿರಬಹುದು. ಮತ್ತೆ ಜಾತಕ ಹೇಳುವವರ ಸುತ್ತಲೂ ಸುತ್ತುತ್ತಿದ್ದಾಳೆ ಅಮಾಯಕಳು" ಎಂದೆ.

"ಜಾತಕ, ವಾಸ್ತು ಎಂದು ಅವುಗಳ ಸುತ್ತ ಸುತ್ತುವುದು ಅರ್ಥಹೀನ. ನಿಮ್ಮ ಮೇಲೆ ದಾಳಿ ಮಾಡಿದವರು ಒಟ್ಟು ಎಂಟು ಮಂದಿ ಎಂದು ಲೆಕ್ಕ ತಿಳಿದಿದೆ. ಅವರಲ್ಲಿ ಐದು ಜನ ಮೈನರ್. ಇನ್ನು ಉಳಿದ ಮೂವರು ಇಪ್ಪತ್ತು ವರ್ಷದ ಒಳಗಿನವರೆ. ನಿಮ್ಮ ಮೇಲೆ ದಾಳಿ ಮಾಡಿದವರೆಲ್ಲರಿಗೂ ಹೆಚ್ಚು ಕಡಿಮೆ ಯಾವುದೋ ಒಂದು ಕ್ರಿಮಿನಲ್ ಹಿಸ್ಟರಿ ಇದ್ದಾಗಲೂ ಪೊಲೀಸ್ ಸ್ಟೇಷನ್‌ನಲ್ಲಿ ಅವರ ಮೇಲೆ ಒಂದು ದೂರು ಸಹ ದಾಖಲಾಗಿಲ್ಲ. ಈ ಹಿಂದಿನಂತೆಯೇ ಅವರಿಗೆ ಅಭ್ಯಾಸವಾದ ಪದ್ಧತಿಯಲ್ಲಿಯೆ ನಿಮ್ಮ ಮೇಲೆ ದಾಳಿ ಮಾಡಿದ್ದಾರೆ. ಈ ಹಿಂದೆ ಮಾಡಿದ ಅಪರಾಧಗಳೆಲ್ಲವೂ